ಕೊಡುವೆ ಹೂವಿಗೆ ನೀನು ನಿನ್ನ ಸಮೃದ್ಧಿಯನ್ನು
ಕೊಡುಗೆ ನೀಡುವೆ ನೀನು ಅವಕ್ಕೆ ನಿನ್ನ ಉಕ್ಕುವ ತಾಜಾತನವನ್ನು

ಜೇನ್ನೊಣಗಳ ಪ್ರೀತಿ ಅವುಗಳದೇ ಘನತೆ ನಿನ್ನ ಕೈಗಳಿಗೆ ಬರಲೆಂಬ ಬಯಕೆ ನನಗೆ,
ಅವು ಸಾಯುತ್ತವೆ, ಬೆರೆಸುತ್ತವೆ ಮಣ್ಣಲ್ಲಿ ತಮ್ಮ ಮಕ್ಕಳುಮರಿಗಳ ಒಡಲನ್ನು:
ಹೀಗೆ ಉಳುತ್ತವೆ ಆ ಹೊಳೆಯುವ ಹುಳುಗಳು ನನ್ನೆದೆ ಹೊಲವನ್ನು.

ಬಿಸಿಲಲ್ಲಿ ಬಾಯಾರಿದ ಬಂಡೆ ನಾನು, ಆಗ
ಹಾಡುತ್ತೇನೆ ನಿನ್ನ ಸನಿಹ ಸುಖದಿಂದ ಉಕ್ಕಿ,
ಹೀರಿದೆ ಈ ಬಂಡೆ ನೀನು ದನಿಪಾತ್ರೆಯಲ್ಲಿ ಕಾಡಿಂದ ತಂದ ಜೀವಜಲವನ್ನು.

## ಕವಿತೆ



...ಆ ವಯಸ್ಸಿನಲ್ಲಿ ...ಬಂತು ಕವಿತೆ
ಹುಡುಕಿಕೊಂಡು ನನ್ನ,
ಎಲ್ಲಿಂದ ಬಂತು, ಅದು ಯಾವಾಗ ಬಂತು
ಗೊತ್ತಿಲ್ಲ ನನಗೆ, ಗೊತ್ತಿಲ್ಲ ನನಗೆ
ಅದು ಮಾಗಿಯಿಂದ ಬಂತೇನು,
ಹರಿವ ನದಿಯಿಂದ ಬಂತೇನು.
ಗೊತ್ತಿಲ್ಲ ನನಗೆ ಹೇಗೆ ಯಾವಾಗ ಬಂತೆಂದು,
ದನಿಗಳಲ್ಲ ಅವು ಪದಗಳಲ್ಲ ಮೌನವೂ ಅಲ್ಲ,
ನನ್ನನ್ನು ಕರೆಯಿತು ಅದು ನಾ ನಡೆವ ಬೀದಿಯಿಂದ
ಇರುಳು ಕವಲುಗಳ ತೆಕ್ಕೆಯಿಂದ,
ನನ್ನನ್ನೇ ಆರಿಸಿತು ಅದು ಹಲವು ಗೆಳೆಯರ ನಡುವಿನಿಂದ,
ಬೆಂಕಿ ಕೆನ್ನಾಲಗೆಯ ಒಳಗಿಂದ,
ಒಂಟಿಯಾಗಿ ಮನೆಗೆ ಮರಳುವಾಗ,
ಅಗೋ ಅಲ್ಲಿತ್ತು, ಮುಖವಿಲ್ಲದೆ ನಿಂತಿತ್ತು,
ಅದು ಬಂದು ನನ್ನ ಮುಟ್ಟಿತು.

ಏನು ಹೇಳಬೇಕೆಂದು ನನಗೆ ತಿಳಿದಿರಲಿಲ್ಲ,
ಹೆಸರು ಕೊಡುವ ಆಟವ ನನ್ನ ನಾಲಿಗೆ ಅರಿತಿರಲಿಲ್ಲ,
ಕಣ್ಣು ಕುರುಡಾಗಿತ್ತು.
ಒಳಮನದೊಳಗೆ ಏನೋ ಮೊದಲಾಯ್ತು,
ಒಳಹೊರಗೆ ಜ್ವರದ ಬೇಗೆಯೋ